739 739

ಮೈಸೂರ ಗಜಿತ.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 1, ಸ್ಯ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೆಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್ಗಳರು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇಸ್ತಿಹಾರ್ ನಾಮೆ.

ಫಾರೆಸ್ಟ್ ಇಲಾಖಾ.

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅನುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು ಸಿಕಾರಿಪುರದ ಕೋರಿ	14ನೇ ನವಂಬರ್ 1890	-ಹೆಚ್ಚು ಕಡಮೆ	250 ಟನ್ಗಳು.
ಶಿವಮೊಗ್ಗಾ ..	ಡಿಟೋ—17ನೇ	ಡಿಟೋ	450 ಡಿಟೋ
ತೀರ್ಥಹಳ್ಳಿ ..	ಡಿಟೋ—22ನೇ	ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕ ಮಗಳೂರು	ಡಿಟೋ—28ನೇ	ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ	ಡಿಟೋ— 4ನೇ	ಡಿಸಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟಣ	ಡಿಟೋ—10ನೇ	ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ—15ನೇ	ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು	ಡಿಟೋ—20ನೇ	ಡಿಟೋ	150 ಡಿಟೋ

ಹರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮುಕ್ತಂಗಳ 34, 35ನೇ ನಂಬರ್ ಗೆಜೆಟ್ಗಳಲ್ಲಿ ಪಾಯಿಷ್ ಮಾಡಲ್ಪಟ್ಟ ಇಸ್ತಿಹಾರ್ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್ಗಳು ಹರಾಜ್ ಕಾಲದಲ್ಲಿ ವೋದ ಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 18ನೇ ಮಾಹೇ 1890.

ನಂ. 1.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟನಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆಕಂಡ ಜೋಡಿ ವ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ [illegible]ರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾ[illegible]ವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಯಿಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮಿನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ತರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮಿನಿನಲ್ಲಿ ತನಗೆ ಹಕ್ಕು ಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂ ದು ತೃಪ್ತಿ ಕರವಾಗಿ ರುಜುವಾತು ಮಾಡಿದಾಗ್ಯೂ ಅಥವಾ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 170ನೇ ಸೆಕ್ಷನ್ ಅನುಸೊರವಾಗಿ ಜಾಮೀನ್ ಕೊಟ್ಟಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜು ಖಾಯಂ ಮಾಡಲ್ಪಟ್ಟ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ದಿರ್ವಾರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಜೋಡೀ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್	ಯಾವ ಬಾಕಿಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಖಂ. ಕು. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ	ಕೋಲಾರ	ಹೆಣ್ಣಲಿಲ್ಲಿ	ಕಾಯಂಗುತ್ತಾ ಜೊಕ್ಕಹಳ್ಳಿ ಗ್ರಾಮದಲ್ಲಿ 8 ರಲ್ಲಿ ಯೀಳು ಹಿಸ್ಸೆ	ಕೃಷ್ಣಪ್ಪ ವ ಸೈರೆ	23 15 8¼	139 5 6	99 8 5	64 1 4 ಪಾವತಿ ತಾರೀಖು ವರಿವಿಗೆ ಬಡ್ಡಿ ಸಹ ಕೊಡಬೇಕು	ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ ರೂ ಬರೂ 1890ನೇ ಇಸವಿ ನವಂಬರ್ 29ನೇ ತಾರೀಖಿನಲ್ಲಿ
		ಬಟ್ಟಪ್ಪನಹಳ್ಳಿ	ಕಾಯಂಗುತ್ತಾ ಆವಲಕೊಂಡರಾಯನಹಳ್ಳಿ	ರಂಗಾಚಾರ್ ರಾಮಾಚಾರ್	ಎಕರೆ. ಗುಂಟೆ. 179 13	56 5 0	56 5 0	116 12 0 ಡಿಟೋ	ಡಿಟೋ
		ಹೊನ್ನಾರ	ಜೋಡಿ ಹೊಸಹಳ್ಳಿ	ರಾಜಾರಾವ್ ವ ಸೈರೆ	689 16	940 1 0	705 3 1	60 4 4 ಡಿಟೋ	ಡಿಟೋ 28 ಡಿಟೋ
		ಬಟ್ಟಪ್ಪನಹಳ್ಳಿ	ಕಾಯಂಗುತ್ತಾ ರಾಮೇನಹಳ್ಳಿ	ಕಟ್ಟೆ ವಾಸು ದೇವಾಚಾರ್	133 13	54 3 0	54 3 0	118 15 0 ಡಿಟೋ	ಡಿಟೋ 27 ಡಿಟೋ
		ಜಂಗಮಕೋಟೆ	ಜೋಡಿ ಹಾರಡಿ ಗ್ರಾಮ	ಮಲ್ಲಿಕಾರ್ಜುನ ಭಟ್ಟಾ ವಗೈರೆ	928 1	291 3 2	248 3 3	348 0 1 ಡಿಟೋ	ಡಿಟೋ 28 ಡಿಟೋ
		ಜಂಗಮಕೋಟೆ	ಜೋಡಿ ಅಂದಾರ್ಲಹಳ್ಳಿ ಗ್ರಾಮದಲ್ಲಿ ನೆಲವಂಗಲದ ನಂಜುಂಡಶಾಸ್ತ್ರಿ ವೃತ್ತಿ	ದೊಡ್ಡಕೃಷ್ಣಾವಧಾನಿ, ಶ್ರೀನಿವಾಸಶಾಸ್ತ್ರಿ, ನಂಜುಂಡಶಾಸ್ತ್ರಿ	8 27	11 15 0	10 0 5	81 1 8 ಡಿಟೋ	ಡಿಟೋ ಡಿಟೋ

ಪರಾ.—ಜೋಡೀದಾರರುಗಳಿಂದಲಾಗಲಿ ಯಾ ಕಾಯಂಗುತ್ತಾದಾರರುಗಳಿಂದ ಆಗಲಿ ಬಾಧ್ಯತೆ ಮೂಲಕ ಇವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಾಗಲಿ ದೇಣೀಗಳಿಗಾಗಲಿ ಮತ್ತು ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ವಳಪಟ್ಟಿರುವದಿಲ್ಲ.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ನೋಟಿಫಿಕೇಷ್ಕ.

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮಾರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು. ಈ ಆನೆಯನ್ನು ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನ ಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ.		ಹಿಡಿಯಲ್ಪಟ್ಟ ತಾರೀಖು.
		ಅಡಿ.	ಅಂಗಲ	
ಕಲ್ಯಾಣಿ	ಹೆಂಣು	7	4	28—6—86

ಪರಾ.—ಈ ಆನೆಯು ಚನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ವೊಳ್ಳೆ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ವುಪಯೋಗಿಸಲ್ಪಡುತ್ತಾ ಇದೆ.

ಬಿ. ರಾಮಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕ್ಕಸರವೇಟರ್ ಆಫ್ ಮೈಸೂರ್.

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ಮೆಂಟ್ ಆಫಿಸರಿಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್ಟಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಬಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್ ಚಂದಾ ದರ ವಗೈರ.

ತಾರೀಖು 26ನೇ ಜನವರಿ 1889.

ಮೈಸೂರು ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ. ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ್ ಮುಂತಾದವುಗಳು ಬೆಂಗಳೂರಲ್ಲಿರುವ ಮೈಸೂರು ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲು ಮೈಸೂರು ಕ್ಕೆಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8